**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**

**ಎಸ್.ಸಿ ಸಂಖ್ಯೆ– 8/2023**

| | | |
|---|---|---|
| **ಸಾಕ್ಷಿದಾರನ ಹೆಸರು** | : ಚಂದನ್ | ಪಿ.ಡಬ್ಲ್ಯೂ–6 |
| **ತಂದೆಯ ಹೆಸರು** | : ದಿವಾಕರ್ | ಸಿ.ಡಬ್ಲ್ಯೂ– 13 |
| **ವಯಸ್ಸು** | : 31 ವರ್ಷ | |
| **ಉದ್ಯೋಗ** | : ಗಾರ್ಮೆಂಟ್ಸ್‌ನಲ್ಲಿ ಕೆಲಸ | |
| **ವಾಸಸ್ಥಳ** | : ಅರಕೆರೆ ಗ್ರಾಮ, ಶ್ರೀರಂಗಪಟ್ಟಣ ತಾ. | |

**ಸಾಕ್ಷಿಯನ್ನು ಈ ದಿನ ದಿಃ05.03.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

**1.** ನಾನು ಮೆಕಾನಿಕಲ್ ಇಂಜಿನಿಯರಿಂಗ್ ವಿದ್ಯಾಭ್ಯಾಸ ಮಾಡುತ್ತಿದ್ದು, ಅದನ್ನು ಮುಂದುವರೆಸಿರುವುದಿಲ್ಲ. ನಾನು 3 ವರ್ಷ ಇಂಜಿನಿಯರಿಂಗ್ ಮಾಡಿರುತ್ತೇನೆ. ಈಗ ಐದಾರು ವರ್ಷಗಳ ಹಿಂದೆ ನಾನು ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸುವ ಕೆಲಸ ಮಾಡಿಕೊಂಡಿದ್ದೆ. ಅವುಗಳ ನಿರ್ವಹಣೆಯನ್ನು ನಾನೇ ಮಾಡುತ್ತಿದ್ದೆನು.

**2.** ಬೆಲವತ್ತಾದಲ್ಲಿ ನಾನು ಒಂದು ಚಿಕ್ಕ ಹೋಟೆಲ್ ನಲ್ಲಿ ಸಿಸಿಟಿವಿ ಕ್ಯಾಮೆರಾವನ್ನು ಅಳವಡಿಸಿರುತ್ತೇನೆ. ಸದರಿ ಹೋಟೆಲಿನ ಹೆಸರು ನನಗೆ ನೆನಪಿರುವುದಿಲ್ಲ. ಅದು ಯಾರಿಗೆ ಸೇರಿದ್ದು ಎಂದು ನನಗೆ ನೆನಪಿರುವುದಿಲ್ಲ. ನಾನು ಸಿಸಿಟಿವಿ ಕ್ಯಾಮೆರಾ ಅಳವಡಿಸಿದ 6 ತಿಂಗಳಿನಿಂದ  ಒಂದು ವರ್ಷದ ನಂತರ ಒಂದು ದಿನ ಮೇಟಗಳ್ಳಿ ಪೊಲೀಸರು ನನಗೆ ಫೋನ್ ಕರೆ ಮಾಡಿ, ನಿರ್ಧಿಷ್ಟವಾದ ಸಮಯದ ಪುಟೇಜನ್ನು ಸಿಸಿಟಿವಿ ಕ್ಯಾಮೆರಾದಿಂದ

ತೆಗೆದುಕೊಡಬೇಕು ಬನ್ನಿ ಎಂದು ನನ್ನನ್ನು ಕರೆದಿದ್ದು, ನಾನು ಮೇಟಗಳ್ಳಿ ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ನಂತರ ನನ್ನನ್ನು ಸಿಸಿಟಿವಿ ಕ್ಯಾಮೆರಾ ಅಳವಡಿಸಿದ ಬೆಲವತ್ತಾದ ಹೋಟೆಲಿಗೆ ಕರೆದುಕೊಂಡು ಹೋದರು. ಪೊಲೀಸರು ನನಗೆ ನಿರ್ಧಿಷ್ಟ ಸಮಯದ ಸಿಸಿಟಿವಿ ದೃಶ್ಯಾವಳಿಗಳನ್ನು ಕಾಪಿ ಮಾಡಿ ಕೊಡಲು ಕೇಳಿದ್ದು, ಆ ಪ್ರಕಾರ ನಾನು ಸದರಿ ದೃಶ್ಯಾವಳಿಗಳನ್ನು ಪೆನ್ ಡ್ರೈವ್ ಗೆ ಹಾಕಿ ನೀಡಿರುತ್ತೇನೆ. ಆ ಮೊದಲೇ ಪೊಲೀಸರು ಸದರಿ ದೃಶ್ಯಾವಳಿಗಳನ್ನು ಪರಿಶೀಲನೆ ಮಾಡಿದ್ದರು. ನಾನು ಕೇವಲ ದೃಶ್ಯಾವಳಿಗಳನ್ನು ಕಾಪಿ ಮಾಡಿ ಕೊಟ್ಟಿರುತ್ತೇನೆ.

**3.** ಸಾಕ್ಷಿಯು ತನ್ನ ಸಹಿ ಇರುವ ದಾಖಲೆಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಅಮಾನತ್ತು ಮಹಜರ್ ಆಗಿದ್ದು, ಅದನ್ನು ಈಗಾಗಲೇ ನಿಶಾನೆ ಪಿ-9 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ-9(ಬಿ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ಹೋಟೆಲಿನಲ್ಲಿ ಸಹಿ ಹಾಕಿರುತ್ತೇನೆ. ಸಿಸಿಟಿವಿ ದೃಶ್ಯಾವಳಿಗಳನ್ನು ಕಾಪಿ ಮಾಡಿ ನೀಡಿದ್ದಕ್ಕೆ ಸದರಿ ಸಹಿಗಳನ್ನು ಪಡೆದಿರುತ್ತಾರೆ ಎಂದು ತಿಳಿಸಿದರು.

**4.** ನಾನು ಸದರಿ ದೃಶ್ಯಾವಳಿಗಳನ್ನು ಕಾಪಿ ಮಾಡುವ ಕಾಲಕ್ಕೆ ಪೋಟೋಗಳನ್ನು ತೆಗೆದಿರುತ್ತಾರೆ. ಸಾಕ್ಷಿಯು ನಿಶಾನೆ ಪಿ-10 ರಲ್ಲಿಯ 2 ಮತ್ತು 3 ನೇ ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ.

**5.** ಸಾಕ್ಷಿಗೆ ದಾಖಲೆಯನ್ನು ತೋರಿಸಿ ಸಹಿಯನ್ನು ಗುರುತಿಸಲು ಕೇಳಿದಾಗ ಸಾಕ್ಷಿ ಸದರಿ ಸಹಿ ತನ್ನದ್ದಲ್ಲ ಎಂದು ನುಡಿಯುತ್ತಾರೆ. (ಸಾಕ್ಷಿಗೆ ದಿಃ- 20.01.2020 ರ ಕಲಂ

65–ಬಿ ಅಡಿಯ ಪ್ರಮಾಣ ಪತ್ರವನ್ನು ತೋರಿಸಿದಾಗ ಸಾಕ್ಷಿಯು ತನ್ನ ಸಹಿ ಅಲ್ಲ ಎಂದು ಗುರುತಿಸಿರುವುದಿಲ್ಲ.) ಪೊಲೀಸರ ಮುಂದೆ ನಾನು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ನಾನು ದೃಶ್ಯಾವಳಿಗಳನ್ನು ಕಾಪಿ ಮಾಡಿ ನೀಡುವಾಗ ಸಿಸಿಟಿವಿ ಕ್ಯಾಮೆರಾ ಸುಸ್ಥಿತಿಯಲ್ಲಿತ್ತು.

**6.** ದೃಶ್ಯಾವಳಿಗಳನ್ನು ಕಾಪಿ ಮಾಡಿ ನೀಡಿದ ಪೆನ್ ಡ್ರೈವನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ. ಹಲವಾರು ವರ್ಷಗಳು ಆಗಿರುತ್ತವೆ ಎಂದು ನುಡಿಯುತ್ತಾರೆ. ಸದರಿ ದೃಶ್ಯಾವಳಿಗಳನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ. ನಾನು ದೃಶ್ಯಾವಳಿಗಳನ್ನು ನೋಡಿರುವುದಿಲ್ಲ. ಕೇವಲ ನಿರ್ಧಿಷ್ಟ ಸಮಯದ ದೃಶ್ಯಾವಳಿಯನ್ನು ಕಾಪಿ ಮಾಡಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

**ಪಾಟೀ ಸವಾಲುಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

**7.** ನನ್ನನ್ನು ದಿಃ- 20.01.2020 ರಂದು ದೃಶ್ಯಾವಳಿಗಳನ್ನು ಕಾಪಿ ಮಾಡಲು ಕರೆಸಿದ್ದರು ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಸದರಿ ಹೋಟೆಲಿನ ಹೆಸರು ಲಕ್ಷ್ಮೀ ಆಗಿರುತ್ತದೆ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ.

**8.** ಸಾಕ್ಷಿಗೆ ನಿಶಾಪಿ–10 ರಲ್ಲಿಯ 3 ನೇ ಪೋಟೋವನ್ನು ತೋರಿಸಿ ಅದರಲ್ಲಿ ಒಂದು ಮಾನಿಟರ್ ಇರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ದೃಶ್ಯಾವಳಿಗಳನ್ನು ನಾನು ನೋಡಿ ಚಲಾಯಿಸಿ ನಂತರ ಅವುಗಳನ್ನು ಪೆನ್ ಡ್ರೈವಿಗೆ ಕಾಪಿ

ಮಾಡಿಕೊಟ್ಟಿರುತ್ತೇನೆ ಎಂದರೆ ಸಾಕ್ಷಿಯು ಪೊಲೀಸರು ನಿರ್ಧಿಷ್ಟ ಸಮಯವನ್ನು ಹೇಳಿದ್ದು, ಆ ಸಮಯದ ದೃಶ್ಯಾವಳಿಗಳನ್ನು ಕಾಪಿ ಮಾಡಿ ನೀಡಿರುತ್ತೇನೆ, ನಾನು ದೃಶ್ಯಾವಳಿಗಳನ್ನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ.

**9.** ಸಾಕ್ಷಿಗೆ ನಿಶಾನೆಪಿ–7 ನ್ನು ತೋರಿಸಿ ಅದೇ ಪೆನ್ ಡ್ರೈವ್ ನಲ್ಲಿ ಸಿಸಿಟಿವಿ ದೃಶ್ಯಾವಳಿಗಳನ್ನು ಕಾಪಿ ಮಾಡಿ ನೀಡಲಾಗಿರುತ್ತದೆ ಎಂದರೆ ಸಾಕ್ಷಿಯು ನೆನಪಿಲ್ಲ, ಬಹಳ ವರ್ಷಗಳಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಸ್ಥಳದಲ್ಲಿ ಪೊಲೀಸರು ದೃಶ್ಯಾವಳಿಗಳನ್ನು ಪಡೆಯುವ ಕಾಲಕ್ಕೆ ಬರವಣಿಗೆ ಮಾಡಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿ. ಅದೇ ಪ್ರಕಾರ ನಾನು ಸಿಸಿಟಿವಿ ದೃಶ್ಯಾವಳಿಗಳಿಗೆ ಸಂಬಂಧಪಟ್ಟಂತೆ ಕಲಂ **65**–ಬಿ ಅಡಿಯ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಎಂದರೆ ಸಾಕ್ಷಿಯು ಅದರಲ್ಲಿರುವ ಸಹಿ ನನ್ನದಲ್ಲ ಎಂದು ನುಡಿಯುತ್ತಾರೆ. ಸದರಿ **65**–ಬಿ ಅಡಿಯ ಪ್ರಮಾಣ ಪತ್ರದಲ್ಲಿರುವ ಸಹಿ ನನ್ನದೇ ಎಂದರೆ ಸರಿಯಲ್ಲ. ಅದೇ ರೀತಿ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆ ಭಾಗವನ್ನು ನಿಶಾನೆ ಪಿ–11 ಎಂದು ಗುರುತಿಸಲಾಯಿತು. ಎಲ್ಲಾ ವಿಚಾರ ತಿಳಿದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ–**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿಯುತ್ತಾರೆ.

ಮರುವಿಚಾರಣೆಃ– ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸ ಇ ಎ ಒ**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**
**ಮೈಸೂರು.**